# 17

# ಮಹಾ ಗ್ಯಾಲಿಲಿಯನ್ ಸೇವೆ

## ಗಲಿಲಾಯಕ್ಕೆ ಹಿಂದಿರುಗಿದ್ದರಿಂದ ಪರ್ಣಶಾಲೆಗಳ ಹಬ್ಬದವರೆಗೆ

**ಪರಿಚಯಾತ್ಮಕ.**-*a. ಸಮಯ ಮತ್ತು ಸ್ಥಳ.*-ಈ ಅವಧಿಯ ಒಂದು ವರ್ಷ ಮತ್ತು ಒಂಭತ್ತು ತಿಂಗಳದ್ದಾಗಿರುವುದು - ಯೇಸುವಿನ ಸೇವೆಯ ಒಂದು - ಅರ್ಧಕ್ಕಿಂತ ಹೆಚ್ಚಿನದಾಗಿದೆ. ಮೊದಲಿನ ತಿಂಗಳುಗಳಲ್ಲಿ ಅವನು ಯೆರೂಸಲೇಮಿಗೆ ಒಂದೇ ಸಲ ಸಂದರ್ಶಿಸಿದನು. ಕೊನೆಯ ಆರು ತಿಂಗಳುಗಳು ಗಲಿಲಾಯದ ಉತ್ತರಕ್ಕೆ ಮತ್ತು ಪೂರ್ವದಲ್ಲಿಯ ಪ್ರಾಂತ್ಯಗಳಲ್ಲಿಯ ಸಂದರ್ಶಗಳ ಸರಣಿಯಿಂದ ಗುರುತಿಸಲ್ಪಟ್ಟಿದೆ. ಇವುಗಳನ್ನು ಬಿಟ್ಟರೆ, ಗಲಿಲಾಯವು ದೃಶ್ಯವಾಗಿತ್ತು ಮತ್ತು ಕಪೆರ್ನೌಮ ಕೇಂದ್ರವಾಗಿತ್ತು, ಇವು ಕ್ರಿಸ್ತನ ಸೇವೆಯ ಮಹತ್ವದ ಭಾಗವಾಗಿತ್ತು.

*b. ಗುಣಲಕ್ಷಣಗಳು.*-ಅದು (1) ತೀವ್ರವಾದ ಚಟುವಟಿಕೆಯ ಅವಧಿಯಾಗಿತ್ತು. ಅದು ಪ್ರಯಾಣಗಳಿಂದಲೂ, ಪ್ರೀತಿಯ ಮತ್ತು ಬಲದ ಅದ್ಭುತ ಕಾರ್ಯಗಳಿಂದಲೂ, ಬಹಿರಂಗ ಸಂಭಾಷಣೆಗಳಿಂದಲೂ ಮತ್ತು ಪ್ರತ್ಯೇಕ ಬೋಧನೆಯಿಂದಲೂ ತುಂಬಿಕೊಂಡಿತ್ತು. ತಡವಾಗಿ ರಾತ್ರಿಯಲ್ಲಿ ಆಗಾಗ ಪ್ರತ್ಯೇಕವಾಗಿರುತ್ತಿದ್ದನು ಅಥವಾ ಮುಂಜಾವಿನಲ್ಲಿ ಪ್ರಾರ್ಥನೆಗಾಗಿ ಏಕಾಂತದಲ್ಲಿರುತ್ತಿದ್ದನು. (2) ಜನರ ಗುಂಪುಗಳೊಂದಿಗೆ ಪ್ರಸಿದ್ಧಿ. ಎಲ್ಲಾ ಭಾಗಗಳಿಂದ, ಎಲ್ಲಾ ತರಗತಿಗಳಿಂದ ಜನರು ಆತನ ವಾಕ್ಯಗಳನ್ನು ಕೇಳಲು ಬಂದರು, ಸಾಕ್ಷಿಕೊಟ್ಟರು, ತಮ್ಮ ಸ್ವಂತ ವ್ಯಕ್ತಿತ್ವಗಳಲ್ಲಿ ಆತನ ದೈವಿಕ ಬಲವನ್ನು ಅನುಭವಿಸಿದರು, ಮತ್ತು ಪಟ್ಟಣಗಳಲ್ಲಿ ಆತನ ಮಾರ್ಗವನ್ನು ತಡೆಗಟ್ಟುವಂತೆ ಗುಂಪುಗುಂಪಾಗಿ ಬಂದರು, ಅದರಿಂದ ಆತನು ಏಕಾಂತ ಸ್ಥಳಗಳಿಗೆ ಹೋಗ ಬೇಕಾಯಿತು. (3) ಶಾಸ್ತ್ರಿಗಳ ಮತ್ತು ಫರಿಸಾಯರ ಬೆಳೆಯುತ್ತಿದ ವಿರೋಧ ಮತ್ತು ಕೊನೆಗೆ ಹೆರೋದ ಅಂತಿಪನ ವಿರೋಧ. (4) ಮುಕ್ತಾಯದ ತಿಂಗಳುಗಳಲ್ಲಿ, ಜನಸಮೂಹಗಳ ಪ್ರಸಿದ್ಧಿಯನ್ನು ಕಳೆದು ಕೊಂಡಿದ್ದು, ಮತ್ತು ಅದರ ಪರಿಣಾಮವಾಗಿ ಗಲಿಲಾಯವನ್ನು ಬಿಟ್ಟು ಹೋದದ್ದು.

### I. ಮೊದಲನೆಯ ಅಥವಾ ಸಿದ್ಧತೆ ಹಂತ –
### ಶಿಷ್ಯರನ್ನು ಎರಡನೆಯ ಸಲ ಕರೆದದ್ದರ ವರೆಗೆ.

**1. ನಜರೇತಿನಲ್ಲಿ ತಿರಸ್ಕರಿಸುವಿಕೆ** (ಲೂಕ 4:14-30).-ಬಾಲಕನಾದ ಯೇಸುವು ಚೆನ್ನಾಗಿ ತಿಳಿಯಲ್ಪಟ್ಟ ಹಾಗೂ ಪ್ರೀತಿಸಲ್ಪಟ್ಟ. ಗಲಿಲಾಯದಲ್ಲಿ ಒಂದು ಗ್ರಾಮವು ಇತ್ತೆಂದು ಒಬ್ಬನು ಯೋಚಿಸಬಹುದು. ನಜರೇತಿನಿಂದ ಯೇಸುವು ತನ್ನ ಬಾಪ್ತಿಸ್ಮಕ್ಕಾಗಿ ಹೊರಟು ಹೋಗಿ ಒಂದು ವರ್ಷ ಇಲ್ಲವೇ ಹೆಚ್ಚು ಸಮಯ ಆಯಿತು. ಆತನು ಯೆರೂಸಲೇಮಿನಲ್ಲಿ ಮಾಡಿದಂತೆ ಈಗ ಜನರ ವಿಶ್ವಾಸಕ್ಕೆ ತನ್ನನ್ನು ಕೊಡಲು ಹಿಂದಿರುಗಿ ಬರುತ್ತಾನೆ. ಮಾರ್ಗದಲ್ಲಿ ಆತನು ಕಾನಾದಲ್ಲಿ ಒಬ್ಬ ಪ್ರಧಾನನ ಮಗನನ್ನು ಗುಣಪಡಸಿದ್ಧರಲ್ಲಿ ತನ್ನ ಎರಡನೆಯ ಅದ್ಭುತಕಾರ್ಯ ಮಾಡಿದನು (ಯೋಹಾನ 4:46-54), ಮತ್ತು ಬಹುಶಃ ತನ್ನ ಬಾಲ್ಯದ ಮನೆಗೆ ಹೋಗುವ ದಾರಿಯಲ್ಲಿ ಆತನು ಬೋಧಿಸಿದನು. ನಜರೇತಿನಲ್ಲಿ

ಪರಿಣಾಮವು ಯೆರೂಸಲೇಮಿನಲ್ಲಿ ಇದ್ದಂತೆಯೇ ಇತ್ತು. ಈ *ಯುವಕ ಬಡಿಗನು,* - *ಆತನು ಅವರಿಗೆ* ಬೋಧಿಸಲು ಹಕ್ಕು ಎಲ್ಲಿತ್ತು? *ಯೇಸುವು* ಮೂವತ್ತು ವರ್ಷಗಳವರೆಗೆ ಯಾರ ಮಧ್ಯದಲ್ಲಿ ಜೀವಿಸಿದ್ದನೋ ಅವರೇ ಮೊದಲು ಆತನ ಜೀವ ತೆಗೆಯಲು ಹುಡುಕಿದ್ದು ಜನರ ಕುರುಡುತನದ ಮೇಲೆ ಒಂದು ದುಃಖಕರವಾದ ವ್ಯಾಖ್ಯಾನವಾಗಿದೆ.

**2. ಕಪೆರ್ನೌಮ ಆಯಲ್ಪಟ್ಟದ್ದು** (ಮತ್ತಾಯ 4:12-16).-ನಜರೇತನ್ನು ಬಿಟ್ಟು ಯೇಸುವು ಕಪೆರ್ನೌಮಿಗೆ ಬಂದನು. ಗಲಿಲಾಯ ಸಮುದ್ರದ ಉತ್ತರ ಪೂರ್ವದ ತೀರದಲ್ಲಿ ಒಂದು ಜನಭರಿತ ವ್ಯಾಪಾರದ ಕೇಂದ್ರವಾಗಿತ್ತು. ಗಲಿಲಾಯ ಮಹಾ ಸೇವೆಯ ಕೇಂದ್ರವಾಗಿ ಅದರ ಆಯ್ಕೆಯು ಚೆನ್ನಾಗಿದೆ, ಸುಮಾರು ಎರಡು ವರ್ಷಗಳ ವರೆಗೆ ಯೇಸುವು ಒಂದು ಸಲಕ್ಕೆ ಅನೇಕ ವಾರಗಳಂತೆ ಅಲ್ಲಿಂದ ಬೇರೆ ಕಡೆಗೆ ಹೋಗಲಿಲ್ಲ. ಕಪೆರ್ನೌಮಿನಿಂದ ಆತನು ತನ್ನ ಪ್ರಯಾಣಗಳಿಗೆ ಹೊರಡುತ್ತಿದ್ದನು; ಅಲ್ಲಿಗೆ ಹಿಂದಿರುಗುತ್ತಿದ್ದನು. ಇಲ್ಲಿ ಆತನ ಮನೆಯಿತ್ತು ಎಂದು ಹೇಳಬಹುದು ಅದು ಈ ಅವಧಿಯಲ್ಲೆಲ್ಲಾ ಅವನ ವಾಸಸ್ಥಳವಾಗಿತ್ತು.

**3. ಅದ್ಭುತಕರವಾಗಿ ಮೀನುಗಳನ್ನು ಹಿಡಿದದ್ದು ಮತ್ತು ಶಿಷ್ಯರಿಗೆ ಎರಡನೆಯ ಕರೆ** (ಮತ್ತಾಯ 4:18-22; ಲೂಕ 5:1-11).-ಕಪೆರ್ನೌಮನ್ನು ಅಯ್ಕೆಮಾಡಿಕೊಂಡ ಸ್ವಲ್ಪದರಲ್ಲಿ, ಯೇಸುವು ಎರಡನೆಯ ಮತ್ತು ಹೆಚ್ಚು ಮಹತ್ವದ ಕರೆಯನ್ನು ಶಿಷ್ಯರಿಗೆ ಕೊಟ್ಟನು. ಅವನ ಮೇಲೆ ಅಗಾಧವಾಗಿ ಪ್ರಭಾವ ಬೀರಿದ ಅದ್ಭುತಕರವಾಗಿ ಮೀನುಗಳನ್ನು ಹಿಡಿದ ಘಟನೆಗೆ ಸಂಬಂಧಿಸಿ ನಡೆಯಿತು. ಪೇತ್ರ ಮತ್ತು ಅಂದ್ರೇಯ, ಯಾಕೋಬ ಮತ್ತು ಯೋಹಾನ ಬೆಸ್ತರಾಗಿದ್ದರು. ಅವರಲ್ಲಿ ಮೂವರು ಮೊದಲಿನ ಐದು ಜನ ಶಿಷ್ಯರಲ್ಲಿ ಇದ್ದರು (ಯೋಹಾನ 1:35-42). ಅನಂತದರ ಈ ಕರೆಯು ಮೊದಲಿನದಕ್ಕಿಂತ ಎರಡು ವಿಷಯಗಳಲ್ಲಿ ಭಿನ್ನವಾಗಿತ್ತು: ಅದು ಯೇಸುವಿಗೆ ಹೆಚ್ಚು ನಿರ್ದಿಷ್ಟವಾಗಿ ಸಂಬಂಧಿಸಿತು, ಮತ್ತು ಅದು ಸೇವೆಗೆ ಸ್ಪಷ್ಟವಾದ ಮಂಡಳಿಯು ಆತನ ಸುತ್ತಲೂ ಕೂಡಿಬರುವಂಥದ್ದು, ಭವಿಷ್ಯದ ಅಪೊಸ್ತಲ ಮಂಡಳಿಯ ಪ್ರಾರಂಭವು ಸಿದ್ಧತೆಯ ಹಂತವನ್ನು ಮುಕ್ತಾಯಗೊಳಿಸುತ್ತದೆ.

## II. ಎರಡನೆಯ ಹಂತ – ಅಪೊಸ್ತಲರನ್ನು ನೇಮಿಸಿದ್ದು, ಮತ್ತು ಪರ್ವತ ಪ್ರಸಂಗದವರೆಗೆ.

**1. ಕಪೆರ್ನೌಮಿನಲ್ಲಿ ಒಂದು ಸ್ಮರಣೀಯ ಸಬ್ಬತ್ತ.**-(ಮಾರ್ಕ 1:21-34).-ಯೇಸುವು ತನ್ನ ನಾಲ್ಕು ಜನ ಶಿಷ್ಯರೊಂದಿಗೆ ಕಪೆರ್ನೌಮಿಗೆ ಹಿಂದಿರುಗಿದನು, ಮತ್ತು ಕೂಡಲೇ ಆಳ ವಾಗಿ ಚಟುವಟಿಕೆಯಿಂದ ತುಂಬಿದ ಬಹಿರಂಗ ಸೇವೆಯಲ್ಲಿ ಪ್ರವೇಶಿಸಿದನು. ಸಭಾ ಮಂದಿರದಲ್ಲಿ ಹೋಗಿ "ಅವರು ಆಶ್ಚರ್ಯಪಡುವಂತೆ" ಬಲದೊಂದಿಗೆ ಬೋಧಿಸಿದನು, ಆದರೆ ಹೆಚ್ಚಾಗಿ ಅವರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದ್ದು ದೆವ್ವಗಳಿಂದ ಪೀಡಿತರಾದ ಆ ನತದೃಷ್ಟರಲ್ಲಿ ಒಬ್ಬನನ್ನು ಗುಣಪಡಿಸಿದ್ದು, ಅದು ಕಪೆರ್ನೌಮಿನಲ್ಲಿ ಯೇಸುವಿನ ಮೊದಲನೆಯ ಅದ್ಭುತಕಾರ್ಯವಾಗಿತ್ತು, ಮತ್ತು ದೆವ್ವಗಳ ಪೀಡೆಯಿಂದ ಗುಣಪಡಿಸಿದ ಮೊದಲನೆಯ ದಾಖಲೆಯಾಗಿದೆ. ಅಂಧಕಾರದ ರಹಸ್ಯವಾದ ಬಲಗಳ ಮೇಲೆ ಈ ಜಯಗಳಿಗಿಂತ ಹೆಚ್ಚಾಗಿ ಆತನ ಬೇರೆ ಯಾವ ಅದ್ಭುತಕಾರ್ಯಗಳ ಜನರು ಹೆಚ್ಚು ಆಶ್ಚರ್ಯಚಕಿತರಾಗಲಿಲ್ಲ (ಹೋಲಿಸು ಲೂಕ 4:36, 37; 10:17). ಅದರ ನಂತರ ಆತನು ಪೇತ್ರನ ಅತ್ತೆಯ ಮನೆಯಲ್ಲಿ ಆಕೆಯನ್ನು ಸ್ವಸ್ಥಪಡಿಸಿದನು. ಸಾಯಂಕಾಲವಾದಾಗ, ಸಬ್ಬತ್ ಮುಗಿದಾಗ, ಸಹಾಯಕ ಹಸ್ತಗಳಿಂದ ಕರೆದುಕೊಂಡು ಬಂದ ವಿವಿಧ ರೋಗಗಳಿಂದ ಪೀಡಿತರಾದ ಜನಸಮೂಹವನ್ನು ಗುಣಪಡಿಸಿದನು.

**2. ಗಲಿಲಾಯದಲ್ಲಿ** (ಮಾರ್ಕ 1:35-45).-ಮರುದಿನ ಉದಯದಲ್ಲಿಯೇ ಎದ್ದು ಪ್ರತ್ಯೇಕ ಪ್ರಾರ್ಥನೆಗಾಗಿ ಹೋದಾಗ, ಯೇಸುವನ್ನು ಶಿಷ್ಯರು ಹಿಂಬಾಲಿಸಿದರು. ಜನ ಸಮೂಹವನ್ನು ತಪ್ಪಿಸಿಕೊಳ್ಳಲು ಗಲಿಲಾಯದಲ್ಲಿ ದೊಡ್ಡ ಪ್ರಯಾಣ ಮಾಡಿದನು, ಪ್ರತಿಯೊಂದು ಕಡೆಯಲ್ಲಿ ದೇವರ ರಾಜ್ಯದ ಶುಭವಾರ್ತೆಯನ್ನು ಸಾರಿದನು, ಪ್ರತಿಯೊಂದು ಕಡೆಯಲ್ಲಿ ವಿಧವಿಧವಾದ ರೋಗಗಳನ್ನು ವಾಸಿಮಾಡಿದನು. ಇಡೀ ದೇಶವು ಆಶ್ಚರ್ಯಚರಿತತೆಯ ಜ್ವರದಲ್ಲಿತ್ತು; ಪಲೆಸ್ತೀನದ ಪ್ರತಿಯೊಂದು ಪ್ರಾಂತ್ಯದಿಂದ ಜನರು ಗುಂಪುಗುಂಪಾಗಿ ಬಂದರು (ಮತ್ತಾಯ 4:24, 25). ವಿವರವಾಗಿ ಕೊಡಲ್ಪಟ್ಟ ಅದ್ಭುತ ಕಾರ್ಯವು ಕುಷ್ಠರೋಗಿಯನ್ನು ಗುಣಪಡಿಸಿದ್ದಾಗಿದೆ.

**3.ಪಾರ್ಶ್ವವಾಯು ರೋಗಿಯನ್ನ ಗುಣಪಡಿಸಿದ್ದು ಮತ್ತು ವಿರೋಧದ ಪ್ರಾರಂಭಗಳು** (ಮಾರ್ಕ 2:1-12).-ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಸಮಯ ಯೇಸುವಿನ ಪ್ರಸಿದ್ಧಿಯು ಜನರ ಗುಂಪುಗಳೊಂದಿಗೆ ಮುಂದುವರಿಯಿತು. ಸಾಂಪ್ರದಾಯ ಬದ್ಧರಾದ ಶಾಸ್ತ್ರಿಗಳೊಂದಿಗೆ ಮುಂದುವರಿಯಿತು. ಸಾಂಪ್ರದಾಯ ಬದ್ಧರಾದ ಶಾಸ್ತ್ರಿಗಳಿಂದಲೂ ಫರಿಸಾಯರಿಂದಲೂ ಬೇಗನೇ ವಿರೋಧದ ಗುಣಗುಟ್ಟುವಿಕೆಗಳು ಕೇಳಿಸಲಿಕ್ಕೆ ಪ್ರಾರಂಭವಾದವು. ಅವರ ಟೀಕೆಯು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸುವುದ ರೊಂದಿಗೆ ಸಂಬಂಧಿಸಿ ಹುಟ್ಟಿಬಂತು, ಈ ಸಮಯದಿಂದ ಮುಂದೆ, ಯೆರೂಸಲೇಮಿನಲ್ಲಿಯ ಅಧಿಕಾರಿಗಳಿಂದ ಗೂಢಾಚಾರರು ಆತನ ಹೆಜ್ಜೆಗಳನ್ನು ಹಿಂಬಾಲಿಸುವ ವರಾದರು.

**4. ಮತ್ತಾಯನನ್ನು ಕರೆದದ್ದು ಮತ್ತು ಔತಣ** (ಮತ್ತಾಯ 9:9-13; ಲೂಕ 5:27-32). -ಮೇಲಿನ ವರ್ಗದವರು ವಿರೋಧಿಸಲಿಕ್ಕೆ ಇನ್ನೊಂದು ಕಾರಣವು ಯೇಸುವಿನ ಸುತ್ತಲೂ ಕೂಡಿಬಂದ ಜನರ ವರ್ಗವಾಗಿತ್ತು. ಸುಂಕದವರು, ಒಂದು ವರ್ಗದವರಂತೆ ಅತ್ಯಾಶೆಯುಳ್ಳವರೂ ಹೆಚ್ಚಾಗಿ ದೋಚಿಕೊಳ್ಳುವವರೂ ಆಗಿದ್ದರೂ; ರೋಮನ್ ಸರಕಾರದ ಉಪಕರಣಗಳಂತೆ ಅವರು ಯೆಹೂದ್ಯರಿಂದ ಕಡೆಗಣಿಸಲ್ಪಟ್ಟಿದ್ದರು. ಅವರಲ್ಲಿ ಒಬ್ಬನಾದ ಮತ್ತಾಯನು ಅಥವಾ ಲೇವಿಯು ಯೇಸುವಿನ ಶಿಷ್ಯನಾದನು ಮತ್ತು ತನ್ನ ಒಡೆಯನಿಗಾಗಿ ಒಂದು ದೊಡ್ಡ ಔತಣ ಏರ್ಪಡಿಸಿದನು. ಅದಕ್ಕೆ ಅನೇಕ ಸುಂಕದವರೂ ಪಾಪಿಗಳೂ ಅತಿಥಿಗಳಾಗಿ ಆಮಂತ್ರಿಸಲ್ಪಟ್ಟಿದ್ದರು. ಫರಿಸಾಯರ ಟೀಕೆಗೆ, ನಮಗೆ ಸುಂದರವಾದ ಹೇಳಿಕೆಯಿದೆ, "ನಾನು ನೀತಿವಂತರನ್ನು ಕರೆಯುವುದಕ್ಕೆ ಬರಲಿಲ್ಲ, ಆದರೆ ಪಾಪಗಳನ್ನು ಮಾನಸಾಂತರಕ್ಕೆ ಕರೆಯಲು ಬಂದೆನು."[1]

**5. ಯಾಯೀರನ ಮಗಳು.-ಪ್ರತ್ಯೇಕವಾದ ಅದ್ಭುತಕಾರ್ಯ** (ಮಾರ್ಕ 5:22-43).-ಯೇಸುವು ತನ್ನ ಶಕ್ತಿಯನ್ನು ರೋಗ, ನಿಸರ್ಗ ಮತ್ತು ದೆವ್ವಗಳ ಮೇಲೆ ತೋರಿಸಿದನು. ಮರಣದ ಮೇಲೆ ತನ್ನ ಬಲವನ್ನು ಪ್ರದರ್ಶಿಸುವುದು ಉಳಿದಿತ್ತು. ಮತ್ತಾಯನ ಔತಣದ ಸಮಯದಲ್ಲಿ ಅಥವಾ ಅನಂತರದಲ್ಲಿ, ಕಪೆರ್ನೌಮಿನ ಸಭಾ ಮಂದಿರದ ಅಧಿಕಾರಿಯು ಮರಣದ ಹಾಸಿಗೆಯಲ್ಲಿದ್ದ ತನ್ನ ಮಗಳಿಗಾಗಿ ಬೇಡಿಕೊಳ್ಳಲು ಬಂದನು. ಅಂಥ ಕರೆಗೆ ಯೇಸುವು ಎಂದೂ ತನ್ನ ಕಿವಿಗಳನ್ನು ಮುಚ್ಚಿಕೊಳ್ಳಲಿಲ್ಲ. ಮಾರ್ಗದಲ್ಲಿ ರಕ್ತಕುಸುಮ ರೋಗವಿದ್ದ ಸ್ತ್ರೀಯು ಗುಣಪಡಿಸುವಿಕೆಯಾಯಿತು. ಇದು ಪ್ರತ್ಯೇಕವಾದ ಅದ್ಭುತಕಾರ್ಯ ಎಂದು ಸರಿಯಾಗಿ ಕರೆಯಲ್ಪಟ್ಟಿದೆ. ಯಾಯೀರನ ಮನೆಗೆ ತಲುಪಿದಾಗ, ಅವರು ಚಿಕ್ಕ ಬಾಲಿಕೆಯು ಮರಣದ ನಿದ್ರೆಯಲ್ಲಿ ನಿದ್ರಿಸುತ್ತಿರುವದನ್ನು ಕಂಡರು; ಆದರೆ ಪಾಪದಿಂದ ವಿಮೋಚಿಸಲು ಬಂದಾತನು, ಬಾಲಕಿಯನ್ನು ಸಜೀವವುಳ್ಳವಳೂ ಚೆನ್ನಾಗಿ ಇದ್ದವಳೂ ಆಗಿದ್ದವಳನ್ನಾಗಿ ಆಕೆಯ ತಂದೆತಾಯಿಗಳ ಕೈಗಳಿಗೆ ಒಪ್ಪಿಸಿದನು.

**6. ಎರಡನೆಯ ಪಸ್ಕ** (ಯೋಹಾನ 5:1-47).-ಸಸಾರಾಂಶ ಸುವಾರ್ತಿಕರು ಯೇಸುವು ಶಿಲುಬೆಗೆ ಹಾಕಲ್ಪಟ್ಟ ಸಮಯದ ಪಸ್ಕವನ್ನು ಮಾತ್ರ ನಮೂದಿಸುತ್ತಾರೆ.

ಯೋಹಾನ 5:1ರಲ್ಲಿಯ "ಹಬ್ಬವು" ಒಂದು ಪಸ್ಕ ಹಬ್ಬವಾಗಿದ್ದರೆ, ಆಗ ಯೋಹಾನನು ಒಟ್ಟು ನಾಲ್ಕು ಪಸ್ಕಗಳನ್ನು ನಮೂದಿಸುತ್ತಾನೆ. ಏನೇ ಆಗಲಿ, ಯೇಸುವು ತನ್ನ ಸೇವೆಯ ಈ ಹಂತದಲ್ಲಿ ಯೆರೂಸಲೇಮನ್ನು ಸಂದರ್ಶಿಸುತ್ತಾನೆ. ದಾಖಲಿಸಲ್ಪಟ್ಟ ಒಂದೇ ಘಟನೆಯು ಬೆತ್ಸಾಯಿದ ಕೊಳದ ಬಳಿಯಲ್ಲಿ ಸಹಾಯವಿಲ್ಲದ ಮನುಷ್ಯನನ್ನು ಗುಣಪಡಿಸಿದ್ದು. ಅದು ಸಬ್ಬತ್ತ್ ದಿನವಾಗಿತ್ತು. ಇದಕ್ಕೆ ಯೆಹೂದ್ಯರ ಟೀಕೆಯು, ಯೋಹಾನ 5ನೆಯ ಅಧ್ಯಾಯದಲ್ಲಿಯ ವಿಸ್ತಾರವಾದ ಸಂವಾದಕ್ಕೆ ನಡಿಸಿತು.

**7. ಹೆಚ್ಚಿನ ಸಬ್ಬತ್ ಟೀಕೆ** (ಮತ್ತಾಯ 12:1-14).-ಗಲಿಲಾಯಕ್ಕೆ ಹಿಂದಿರುಗುವ ಮಾರ್ಗದಲ್ಲಿ, ಯೇಸುವಿನ ಶಿಷ್ಯರು ಸಬ್ಬತ್ ದಿನದಂದು ಗೋದಿಯ ಅಥವಾ ಬಾರ್ಲಿಯ ತೆಣೆಗಳನ್ನು ಮುರಿದು ಕೊಂಡು ಕೈಗಳಲ್ಲಿ ಹೊಸದು ತಿಂದದ್ದಕ್ಕಾಗಿ ಟೀಕಿಸಲ್ಪಟ್ಟರು. ಕಪೆರ್ನೌಮಿನಲ್ಲಿ, ಅಥವಾ ಮಾರ್ಗದಲ್ಲಿ ಯಾವುದೋ ಗ್ರಾಮದಲ್ಲಿ, ಯೇಸುವು ಸಬ್ಬತ್ ದಿನದಂದು ಕೈಬತ್ತಿ ಹೋದವನನ್ನು ಗುಣಪಡಿಸಿದ್ದಕ್ಕಾಗಿ ಟೀಕಿಸಲ್ಪಟ್ಟನು. ಈ ಕೊನೆಯ ಸಂಗತಿಯಲ್ಲಿ ಆತನ ವೈರಿಗಳು ಆತನನ್ನು ಕೊಲ್ಲುವ ಯೋಜನೆಯನ್ನು ಮಾಡಲೂ ಮುಂದಾದರು; ಇದು ಅವರ ಧರ್ಮದ ತೋರಿಕೆ ಮತ್ತು ಅಯೋಗ್ಯತೆಗೆ ಒಂದು ಉದಾಹರಣೆಯಾಗಿದೆ.

**8. ಹನ್ನೆರಡು ಶಿಷ್ಯರು ಮತ್ತು ಪರ್ವತದ ಪ್ರಸಂಗ** (ಮತ್ತಾಯ 5-7).-ಯೇಸುವಿನ ವೈಯಕ್ತಿಕ ಸೇವೆಯು ಬಲವುಳ್ಳದ್ದಾಗಿದ್ದಂತೆ, ಅದು ಬಹಳ ಸಂಕ್ಷಿಪ್ತವಾದದ್ದೂ ಆಗಿತ್ತು. ಅದರ ಪ್ರಭಾವವು ಉಳಿದುಕೊಳ್ಳಬೇಕಾಗಿದ್ದರೆ, ಅದರ ವಿಶಿಷ್ಠ ಸಂಗತಿಗಳ ಸಾಕ್ಷಿಗಳಾಗಿ ತರಬೇತಿ ಹೊಂದಿದವರನ್ನು ಮತ್ತು ಅರ್ಹತೆಯುಳ್ಳವರನ್ನು ಒದಗಿಸಬೇಕಾಗಿತ್ತು. ಈ ಉದ್ದೇಶಕ್ಕಾಗಿ ಯೇಸುವು ತನ್ನ ಹಿಂಬಾಲಕರಲ್ಲಿ ಹನ್ನೆರಡು ಜನರನ್ನು ವಿಶೇಷ ತರಬೇತಿಗಾಗಿ ಮತ್ತು ಬೋಧನೆಗಾಗಿ ಆಯ್ದುಕೊಂಡು.[2]

ಅನಂತರ ಯಾವಾಗಲೂ ಪರ್ವತ ಪ್ರಸಂಗ ಎಂದು ತಿಳಿಯಲ್ಪಟ್ಟದ್ದು ಬಂದಿತು. ಅದು ನಮಗೆ ಬಂದಿರುವ ಯೇಸುವಿನ ಅತೀ ದೊಡ್ಡದಾದ ಒಂದೇ ಬಹಿರಂಗ ಬೋಧನೆ ಯಾಗಿರುವುದು. ಅದು ಆತನ ರಾಜ್ಯದ ತತ್ವಗಳ ಘನವಾದ ಸಾರಾಂಶವಾಗಿರುವುದು, ಮತ್ತು ಅದು ಸಿನಾಯಿಯಲ್ಲಿ ಕೊಡಲ್ಪಟ್ಟ ಧರ್ಮಶಾಸ್ತ್ರದ ಮೂಲ ಸತ್ಯಗಳನ್ನು ಮತ್ತು ಅದಕ್ಕೆ ಗಮನಾರ್ಹ ವಿರೋಧ ಸಂಗತಿಗಳನ್ನೂ ಒಳಗೊಂಡಿರುವುದು. ಅದು ಹನ್ನೆರಡು ಜನರಿಗೂ ಮತ್ತು ಶಿಷ್ಯರ ಮಹಾ ಸಮೂಹಕ್ಕೂ ಕೊಡಲ್ಪಟ್ಟಿತು; ಆದರೆ ಸಮೀಪದಿಂದಲೂ ದೂರದಿಂದಲೂ ಒಟ್ಟಾಗಿ ಕೂಡಿಬಂದ ಮಿಶ್ರಗುಂಪಿನ ಎದುರಿನಲ್ಲಿ ಕೊಡಲ್ಪಟ್ಟಿತು. ಹನ್ನೆರಡು ಜನರನ್ನು ಆಯ್ದುಕೊಂಡದ್ದು ಮತ್ತು ಪರ್ವತ ಪ್ರಸಂಗವು ಯೇಸುವಿನ ಸೇವೆಯಲ್ಲಿ ಮಹತ್ತರವಾದ ಹಂತವಾಗಿತ್ತು. ಜನಾಂಗದ ಕಾನೂನು ಬದ್ಧ ಬೋಧಕರು ಆತನನ್ನು ತಿರಸ್ಕರಿಸಿದ್ದರು; ಆದರೆ ಪರ್ವತದ ಮೇಲಿನ ಈ ದಿನದ ಕಾರ್ಯಗಳು, "ನಾನು ನಿಮಗೆ ಹೇಳುತ್ತೇನೆ" ಎಂದು ಪುನಃ ಹೇಳಲ್ಪಟ್ಟದ್ದು, ಸಂಗತಿಗಳ ನೂತನ ಕ್ರಮವು ಹತ್ತಿರವಾಗಿದೆ ಎಂಬ ಬಹಿರಂಗ ತಿಳುವಳಿಕೆಯಾಗಿತ್ತು.

## III. ಮೂರನೆಯ ಹಂತ - ಸಾಮ್ಯದ ಬೋಧನೆಯನ್ನು ಅನುಸರಿಸಿದ್ದು.

**1. ಮುಂದಿರದ ಕಾರ್ಯಗಳು.**-ಯೇಸುವು ತನ್ನ ಮಿಶನರಿ ಕಾರ್ಯವನ್ನು ಕಪೆರ್ನೌಮಿನಲ್ಲಿ ಮತ್ತು ಅದರ ಸುತ್ತಲೂ ಮುಂದುವರಿಸಿದನು. ರೋಮನ್ ಶತಾಧಿಪತಿಯ ಆಳನ್ನು ಗುಣಪಡಿಸಿದ್ದು (ಮತ್ತಾಯ 8:5-13) ಅನ್ಯರಲ್ಲಿಯ ದೊಡ್ಡ ನಂಬಿಕೆಗೆ ಒಂದು ಉದಾಹರಣೆಯನ್ನು ಒದಿಗಿಸಿತು. ಆತನ ರಾಜ್ಯದ ವಿಶ್ವವ್ಯಾಪಕ ತ್ವದ ಪ್ರವಾದಿಕ ನೋಟವನ್ನು ಕೊಟ್ಟಿತು. ಎರಡನೆಯದಾಗಿ ಆತನು ಸತ್ತವನನ್ನು

ಎಬ್ಬಿಸಿದನು, ನಾಯಿನ ಊರಿನ ವಿಧವೆಯ ಮಗನು ಜೀವಿಸುವಂತೆ ಮಾಡಿದನು (ಲೂಕ 7:11-17). ಯೇಸುವಿನ ಇಡೀ ಸೇವೆಯಲ್ಲಿ ಅತೀ ಹೆಚ್ಚಾಗಿ ಮನಮುಟ್ಟುವಂಥ ಘಟನೆಗಳಲ್ಲಿ ಒಂದು ಈ ಅವಧಿಗೆ ಒಳಪಟ್ಟಿರುತ್ತದೆ. ಒಬ್ಬ ಫರಿಸಾಯನ ಮನೆಯಲ್ಲಿ ಔತಣದ ಸಮಯದಲ್ಲಿ ಪಶ್ಚಾತ್ತಾಪ ಪಟ್ಟ ಸ್ತ್ರೀಯು ಯೇಸುವಿನ ಪಾದಗಳನ್ನು ತನ್ನ ಕಣ್ಣೀರಿನಿಂದ ತೊಳೆದಳು ಮತ್ತು ಬಹುಬೆಲೆಯುಳ್ಳ ಸುಗಂಧದ್ರವ್ಯದಿಂದ ಲೇಪಿಸಿದಳು (ಲೂಕ 7:36-50) - ಅತಿಥೇಯನ ಟೀಕೆಗೆ ಅತಿಥಿಯಿಂದ ಇಬ್ಬರು ಸಾಲಗಾರರ ಸುಂದರವಾದ ಪಾಠವು ಕೊಡಲ್ಪಟ್ಟಿತು.

**2. ಯೋಹಾನನಿಗೆ ಯೇಸುವಿನ ಸಾಕ್ಷಿ** (ಲೂಕ 7:18-35).-ಯೋಹಾನನು ಸೆರೆಗೆ ಹಾಕಲ್ಪಟ್ಟದ್ದು ಯೇಸುವು ಯೂದಾಯವನ್ನು ಬಿಡುವುದಕ್ಕೆ ಒಂದು ಕಾರಣವಾಗಿತ್ತು. ಒಂದು ವರ್ಷದವರೆಗೆ ಯೋಹಾನ ಹದ್ದಿನ ಆತ್ಮವು "ಬ್ಲ್ಯಾಕ್ ಕಾಸ್ಸೆಲ್"ದಲ್ಲಿ ಬಂಧಿಸಿಡಲ್ಪಟ್ಟಿತ್ತು. ಅದು ಮೃತ ಸಮುದ್ರದ ಪೂರ್ವದಿಕ್ಕಿನಲ್ಲಿತ್ತು. ಅವರು ತೆರೆದ ಆಕಾಶವನ್ನು ನೋಡಿದ್ದರು. ಯೇಸುವಿನ ಬಾಪ್ತಿಸ್ಮದ ಸಮಯದಲ್ಲಿ ದೈವಿಕ ವಾಣಿಯನ್ನು ಕೇಳಿಸಿಕೊಂಡಿದ್ದನು, ಆತನನ್ನು ಮೆಸ್ಸೀಯನೆಂದು ತೋರಿಸಿದ್ದನು. ಆದರೆ ಯೇಸುವು ಯೋಹಾನನು ನಿರೀಕ್ಷಿಸಿದ್ದ ಕೆಲಸವನ್ನು ಮಾಡುತ್ತಿದ್ದಿಲ್ಲ. ಹೆರೋದರು, ಪಿಲಾತರು ಮತ್ತು ಕಾಯಫರು ಇನ್ನೂ ಅಧಿಕಾರದಲ್ಲಿದ್ದರು. ಆತನು ಜನಾಂಗವನ್ನು ಯಾಕೆ ಒನೆಯಲಿಲ್ಲ, ಹೊಟ್ಟನ್ನು ಸುಡಲಿಲ್ಲ ಮತ್ತು ನೀತಿಯಲ್ಲಿ ಯಾಕೆ ಆಳಲಿಲ್ಲ? ಇಂಥ ಕೆಲವೊಂದು ವಿಚಾರಗಳಿಂದ ಯೋಹಾನನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ ಯೇಸುವಿಗೆ, "ಬರಬೇಕಾಗಿದ್ದವನು ನೀನೋ, ಇಲ್ಲವೇ ನಾವು ಬೇರೊಬ್ಬನಿಗಾಗಿ ಕಾಯಬೇಕೋ?" ಎಂದು ಪ್ರಶ್ನಿಸಿದನು. ನಡೆಯುತ್ತಿದ್ದ ಕಾರ್ಯಗಳ ಬಗ್ಗೆ ತಿಳಿಸಿ ಯೇಸು ಅವರನ್ನು ಹಿಂದಿರುಗಿ ಕಳುಹಿಸಿದನು. ಆಗ ಯೋಹಾನನು ಮೇಲೆ ಉನ್ನತವಾದ ಹೊಗಳಿಕೆಯನ್ನು ಸಾರಿಹೇಳಿದನು.

**3. ಸಾಮ್ಯಬೋಧನೆಯನ್ನು ಉಪಯೋಗಿಸಿದ್ದು** (ಮತ್ತಾಯ 8; ಮಾರ್ಕ 4:1-34). -ಯೇಸುವಿನ ಸಾಮ್ಯಗಳ ಮೊದಲ ದೊಡ್ಡ ಗುಂಪನ್ನು ನಾವು ತಲುಪಿದ್ದೇವೆ. ಇನ್ನು ಎರಡು ದೊಡ್ಡ ಗುಂಪುಗಳು ಬರುತ್ತವೆ, ಒಂದು ಪೆರೆಯದ ಸೇವೆಯಲ್ಲಿ, ಮತ್ತು ಇನ್ನೊಂದು ನಮ್ಮ ಕರ್ತನ ಬಹಿರಂಗ ಸೇವೆಯ ಕೊನೆಯ ದಿನದಲ್ಲಿ, ಸಾಮ್ಯರೂಪದ ಪರಿಚಯವು ಶಿಷ್ಯರಿಗೆ ಆಶ್ಚರ್ಯಕರವಾದದ್ದಾಗಿತ್ತು! (ಮತ್ತಾಯ 13:10). ಇದಕ್ಕೆ ಬೀಗದ ಕೈಯು ಶಾಸ್ತ್ರಿಗಳ ಮತ್ತು ಫರಿಸಾಯರ ಆಳವಾಗುತ್ತಿರುವ ವಿರೋಧದಲ್ಲಿ ಮತ್ತು ಕಪಟತನದಲ್ಲಿ ಕಂಡುಬರುತ್ತದೆ. ಪ್ರಯೋಜನಕಾರಿಯಾದ ಅದ್ಭುತಕಾರ್ಯಗಳ ನಂತರ ಅದ್ಭುತಕಾರ್ಯಗಳು ನಡಿಸಲ್ಪಟ್ಟವು; ಆದಾಗ್ಯೂ ಅವರು ಆತನ ಬಲವನ್ನು ಪಿಶಾಚಿಗಳ ಒಡೆಯನಿಗೆ ಅನ್ವಯಿಸಿದರು (ಮತ್ತಾಯ 12:22-37), ಮತ್ತು ಆತನಿಂದ ಸೂಚಕ ಕಾರ್ಯಗಳನ್ನು ಕೇಳಿಕೊಂಡರು (ಮತ್ತಾಯ 12:38-45). ಅವರ ಪಾಪದ ಅಪಾರತೆಯನ್ನು ಪರಿಶುದ್ಧಾತ್ಮನಿಗೆ ವಿರೋಧವಾದ ಪಾಪವೆಂದು ಕರೆದು ತನ್ನ ಭಾವನೆಯನ್ನು ಯೇಸು ವ್ಯಕ್ತಪಡಿಸಿದನು. ಅದಕ್ಕೆ ಕ್ಷಮಾಪಣೆ ಇಲ್ಲ ಎಂದು ಹೇಳಿದನು. ನಾಯಕರೊಂದಿಗೆ ಹೋರಾಟದಲ್ಲಿ ತೊಡಗುವದನ್ನು ತಡೆಯುವದಕ್ಕಾಗಿ ಆತನು ತನ್ನ ಬೋಧನೆಯನ್ನು ಸಾಮ್ಯಗಳಿಂದ ಮರೆಮಾಡಿದನು. ಏಕಾಂತದಲ್ಲಿ ತನ್ನ ಶಿಷ್ಯರಿಗೆ ಅವುಗಳನ್ನು ವಿವರಿಸಿದನು (ಮತ್ತಾಯ 13:10-16). ಇನ್ನೊಂದು ಕಾರಣವು, ತನ್ನ ಪಾಠಗಳಿಗೆ ಸೌಂದರ್ಯವನ್ನೂ ಒತ್ತಡವನ್ನೂ ಕೂಡಿಸುವುದಾಗಿತ್ತು. ಆದರೆ ಸಾಮ್ಯಗಳ ರೂಪವನ್ನು ಅನ್ವಯಿಸಿದ್ದು ಶಾಸ್ತ್ರಿಗಳ ಮತ್ತು ಫರಿಸಾಯರ ವಿರೋಧವು ಬೆಳೆಯುವದಕ್ಕೆ ನಿಕಟವಾಗಿ ಸಂಬಂಧಿಸಲ್ಪಟ್ಟಿತು.

## IV. ನಾಲ್ಕನೆಯ ಹಂತ - ಕಪೆರ್ನೌಮಿನಲ್ಲಿಯ ಸಭಾಮಂದಿರದಲ್ಲಿಯ ಪ್ರಸಂಗದವರೆಗೆ.

**1. ಸಮುದ್ರದ ಬಿರುಗಾಳಿ ಶಾಂತಪಡಿಸಲ್ಪಟ್ಟದ್ದು ಮತ್ತು ಗದರೇನದಲ್ಲಿ ದೆವ್ವ ಪೀಡಿತರು** (ಮತ್ತಾಯ 8:18-34).-ಯೇಸುವಿನೊಂದಿಗೆ ಸಾಮ್ಯಗಳ ದಿನವು ಒಂದು ದೊಡ್ಡ ದಿನವಾಗಿತ್ತು. ಆತನು ದೆವ್ವಗಳೊಂದಿಗೆ ಹೋರಾಡಿದ್ದನು, ವೈರಿಗಳು ಒಳಸಂಚುಮಾಡಿದ್ದರು, ಸ್ನೇಹಿತರು ಆತನನ್ನು ಹುಡುಕಿದ್ದರು, ಮತ್ತು ತನ್ನ ಅಮರವಾದ ಸಾಮ್ಯಗಳೊಂದಿಗೆ ದಿನವನ್ನು ಮುಕ್ತಾಯಗೊಳಿಸಿದ್ದನು, ತನ್ನ ಕೆಲಸಗಳ ಆಯಾಸದಿಂದ ಚಿಕ್ಕ ಸರೋವರವನ್ನು ದಾಟಿಹೋಗಲು ಅಪ್ಪಣೆ ಕೊಟ್ಟನು; ಈ ಪ್ರಯಾಣವು ಮೊದಲ ದಾಖಲೆಯಾಗಿದೆ, ಆದರೆ ಕೊನೆಯ ದಾಖಲೆಯಲ್ಲ. ತಕ್ಷಣದ ಬಿರುಗಾಳಿ, ಭಯಾನಕತೆ, ಯಜಮಾನನ ಸಮಾಧಾನದ ನಿದ್ರೆ, ಸಮುದ್ರಕ್ಕೆ ಆತನ ಗದರಿಸುವಿಕೆ, "ಸುಮ್ಮನಿರು, ಮೊರೆಯ ಬೇಡ,"[3] ಮತ್ತು ತಕ್ಷಣ ಬಿರುಗಾಳಿಯ ಹಾಗೂ ತೆರೆಗಳ ಶಾಂತತೆ, ಇವೆಲ್ಲವೂ ಸರಳವಾಗಿ ಹೇಳಲ್ಪಟ್ಟಿವೆ. ಒಂದು ಅದ್ಭುತ ಕಾರ್ಯವು ಇನ್ನೊಂದು ಅದ್ಭುತ ಕಾರ್ಯಕ್ಕಿಂತ ದೊಡ್ಡದಾಗಿರುವುದು ಎಂಬುದು ಸತ್ಯವಾಗಿರಲಿಕ್ಕಿಲ್ಲ; ಆದರೆ ಕೆಲವು ಅದ್ಭುತಕಾರ್ಯಗಳು ಜನರನ್ನು ಬೆರಗುಗೊಳಿಸಿದವು, ಕೆಲವು ಹಾಗೆ ಮಾಡಲಿಲ್ಲ. "ಈತನು ಎಂಥವನಾಗಿರಬಹುದು! ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ."[4] ಪೂರ್ವದಡದಲ್ಲಿ ಯೇಸುವು ಜನರನ್ನು ಆಶ್ಚರ್ಯದಿಂದ ತುಂಬಿಸಿದ ಆ ಕಾರ್ಯಗಳಲ್ಲಿ ಇನ್ನೊಂದನ್ನು ಮಾಡಿದನು.[5] ದೆವ್ವ ಹಿಡಿದ ಇಬ್ಬರು ಆತನ ಎದುರಿಗೆ ಬಂದರು. ಒಬ್ಬನು ದೆವ್ವಗಳ ದಂಡಿನಿಂದ ಪೀಡಿತನಾಗಿದ್ದನು. ಗದರೇನರು ಭಯಂಕರನಾಗಿದ್ದ ದೆವ್ವ ಪೀಡಿತನು ಬಟ್ಟೆಹಾಕಿಕೊಂಡು ಸ್ವಸ್ಥನಾಗಿದ್ದುದನ್ನು ನೋಡಿ ಆಶ್ಚರ್ಯಪಟ್ಟರು, ಆದರೆ ತಮ್ಮ ಹಂದಿಗಳನ್ನು ಕಳೆದು ಕೊಂಡದ್ದಕ್ಕಾಗಿ ಕೋಪಗೊಂಡರು; ಮತ್ತು ಯೇಸುವು ಅವರ ಬೇಡಿಕೆಗೆ ಒಪ್ಪಿಕೊಂಡು, ಪಶ್ಚಿಮ ದಡಕ್ಕೆ ಸಮುದ್ರವನ್ನು ದಾಟಿ ಬಂದನು.

**2. ಹನ್ನೆರಡು ಜನರ ಮೊದಲನೆಯ ನಿಯೋಗ** (ಮತ್ತಾಯ 9:35-11:1).-ಗಲಿಲಾಯಕ್ಕೆ ಹಿಂದಿರುಗಿದ ನಂತರ ಯೇಸುವು ತನ್ನ ಬಾಲ್ಯದ ಮನೆಗೆ ಎರಡನೆಯ ಮತ್ತು ಕೊನೆಯ ಸಂದರ್ಶನ ಕೊಟ್ಟನು; ಆದರೆ ನಜರೇತಿನವರು ಮತ್ತೊಮ್ಮೆ ಆತನನ್ನು ತಿರಸ್ಕರಿಸಿದರು. ಕಾರ್ಯವು ಇನ್ನೂ ಮುಂದುವರಿಯತಕ್ಕದ್ದು. ಅದು ಒಬ್ಬನಿಗೆ ಬಹಳ ದೊಡ್ಡದಾಗಿತ್ತು, ಮತ್ತು ಪ್ರಸಂಗಿಸುವ ಕಲೆಯಲ್ಲಿ ಹನ್ನೆರಡು ಜನರು ಪ್ರಾರಂಭಿಕರಾಗಿ ಸೇವೆಮಾಡುವ ಸಮಯ ಈಗ ಹತ್ತಿರವಾಯಿತು. ಅದಕ್ಕನುಗುಣವಾಗಿ ಅವರನ್ನು ಗಲಿಲಾಯದಲ್ಲಿ ಪ್ರಯಾಣ ಮಾಡಲು ಇಬ್ಬಿಬ್ಬರನ್ನಾಗಿ, ಪ್ರಸಂಗಿಸಲು, ಅದ್ಭುತ ಕಾರ್ಯಗಳನ್ನು ಮಾಡಲು ಕಳುಹಿಸಿದನು. ಈ ಮಧ್ಯದಲ್ಲಿ ಯೇಸುವು ತನ್ನ ಕಾರ್ಯ ಮುಂದರಿಸಿದನು. ಹನ್ನೆರಡು ಜನರ ಸೇವೆಯು ಯೇಸುವಿನ ಮತ್ತು ಯೋಹಾನನ ವೈಯಕ್ತಿಕ ಸೇವೆಯಂತೆ, ಸಿದ್ಧತೆಯದಾಗಿತ್ತೆಂಬುದನ್ನು ಗಮನಿಸತಕ್ಕದ್ದು. ಅದು ತಪ್ಪಿಹೋದ ಕುರಿಗಳಂತಿದ್ದ ಇಸ್ರಾಯೇಲಿನ ಮನೆತನದವರಿಗಾಗಿತ್ತು. "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ"[6] ಎಂಬುದು ಅದರ ಭಾರವಾಗಿತ್ತು.

**3. ಸ್ನಾನಿಕನಾದ ಯೋಹಾನನ ಮರಣ** (ಮತ್ತಾಯ 14:1-12).-ಈ ಸಂಬಂಧದಲ್ಲಿ, ಕೆಲಸಮಯದ ಮೊದಲು ಸಂಭವಿಸಿದ ಯೋಹಾನನ ಮರಣವು ಹೇಳಲ್ಪಟ್ಟಿದೆ. ಹೆರೋದ ಅಂತಿಪನು, ಜೀವಿಸುತ್ತಿದ್ದ ತನ್ನ ಸಹೋದರ ಫಿಲಿಪ್ಪನ ಹೆಂಡತಿ ಹೆರೋದ್ಯಳನ್ನು ಮದುವೆಯಾದನು. ಒಬ್ಬ ರಾಜ್ಯಪಾಲನ ಪಾಪವನ್ನು ಖಂಡಿಸುವದರಲ್ಲಿ ಯೋಹಾನನು ಹಿಂಜರಿಯಲಿಲ್ಲ. ವಿವೇಕವಿಲ್ಲದ ಹೆರೋದ್ಯಳು ಯೋಹಾನನು ಸೆರೆಗೆ

ಹಾಕಲ್ಪಡುವ ಮತ್ತು ಅನಂತರ ಅವನು ಹತಸಾಕ್ಷಿಯಾಗುವ ವರೆಗೆ ವಿಶ್ರಾಂತಿ ಪಡೆಯಲಿಲ್ಲ, ಹೆರೋದನಿಗೂ ವಿಶ್ರಾಂತಿ ಕೊಡಲಿಲ್ಲ. ಯೇಸುವಿನ ಬಲಶಾಲೀ ಕಾರ್ಯಗಳ ಪ್ರಸಿದ್ಧಿ ಹೆರೋದನ ಕಿವಿಗಳಿಗೆ ಬಿದ್ದಾಗ, ಅವನು: "ಸ್ನಾನಿಕನಾದ ಯೋಹಾನನು ಸತ್ತವರೊಳಗಿಂದ ಎದ್ದು ಬಂದಿದ್ದಾನೆ" ಎಂದು ಹೇಳಿದನು.

**4. ಐದು ಸಾವಿರ ಜನರಿಗೆ ಊಟಮಾಡಿಸಿದ್ದು ಮತ್ತು ಜೀವನದ ರೊಟ್ಟಿಯ ಮೇಲೆ ಪ್ರಸಂಗ** (ಯೋಹಾನ 6).-ಹನ್ನೆರಡು ಜನರು ಗಲಿಲಾಯದಲ್ಲಿ ಸಂಚಲಿಸಿದ ನಂತರ ಹಿಂದಿರುಗಿ ಬಂದರು. ಯೇಸುವು ಅವರೊಂದಿಗೆ ಸರೋವರದ ಪೂರ್ವಕ್ಕೆ ಜನನಿಬಿಡಸ್ಥಳಕ್ಕೆ ವಿಶ್ರಾಂತಿಗಾಗಿಯೂ ಪ್ರತ್ಯೇಕವಾಗಿ ಅವರಿಗೆ ಬೋಧಿಸುವದಕ್ಕಾಗಿಯೂ ಹೋದನು, ಆದಾಗ್ಯೂ ಜನರು ಆತನ ಮಾತು ಕೇಳಲು ಕೂಡಿಬಂದರು, ಆತನು ಇನ್ನೂ ಅವರಿಗೆ ಬೋಧಿಸಿದನು. ರಾತ್ರಿಯು ಸಮೀಪಿಸುತ್ತಿತ್ತು; ಜನರು ತಮ್ಮ ಮನೆಗಳಿಂದ ದೂರದಲ್ಲಿ ಬಂದಿದ್ದರು, ಊಟಮಾಡಲು ಅವರಲ್ಲಿ ಏನೂ ಇರಲಿಲ್ಲ. ಮನುಷ್ಯನ ಪ್ರತಿಯೊಂದು ಅಗತ್ಯತೆಯ ಬಗ್ಗೆ ಸಹಾನುಭೂತಿಯುಳ್ಳವನಾಗಿ, ಕೆಲವು ರೊಟ್ಟಿ ಮತ್ತು ಮೀನುಗಳನ್ನು ಅವರು ತಿಂದು ತೃಪ್ತಿಕೊಳ್ಳುವಷ್ಟು ವೃದ್ಧಿಮಾಡಿದನು. ಅದು ಆತನ ಪ್ರಸಿದ್ಧಿಯ ಪರಾಕಾಷ್ಠತೆಯಾಗಿತ್ತು. ಜನಸಮೂಹವು ಆತನನ್ನು ಅರಸನನ್ನಾಗಿ ಮಾಡಲು ನಿರ್ಣಯಿಸಿಕೊಂಡಿತ್ತು, ಅದು ಮೂರನೆಯ ಶೋಧನೆಗೆ ಹಿಂದಿರುಗುವದಾಗಿತ್ತು. ಆದರೆ ಯೇಸುವು ಅವರ ರೀತಿಯ ಮೆಸ್ಸೀಯನಾಗಿರಲಿಲ್ಲ. ಜನ ಸಮೂಹವನ್ನು ಕಳುಹಿಸಿಬಿಟ್ಟು, ತನ್ನ ಹನ್ನೆರಡು ಜನರನ್ನು ಸಮುದ್ರ ದಾಟಿ ಹೋಗಲು ಹೇಳಿದನು. ತಾನು ಪರ್ವತದ ಏಕಾಂತ ಸ್ಥಳಕ್ಕೆ ಹೋದನು. ಅನಂತರ ರಾತ್ರಿಯಲ್ಲಿ ಆತನು ಬಿರುಗಾಳಿಯ ಮುಖಾಂತರ ಸಮುದ್ರದ ಮೇಲೆ ನಡೆಯುತ್ತ ಅವರ ಬಳಿಗೆ ಬಂದನು, ಐದು ಸಾವಿರ ಜನರಿಗೆ ಊಟಮಾಡಿಸಿದ್ದು ಮಾತ್ರವೇ ಎಲ್ಲಾ ಸುವಾರ್ತಿಕರಿಂದ ದಾಖಲೆ ಮಾಡಲ್ಪಟ್ಟ ಅದ್ಭುತಕಾರ್ಯವಾಗಿದೆ. ಯೋಹಾನನು ಮಾತ್ರವೇ ಇದರಿಂದ ಉದ್ಭವವಾದ ಕಪೆರ್ನೌಮಿನ ಸಭಾಮಂದಿರದಲ್ಲಿಯ ಪ್ರಸಂಗವನ್ನು ಕಾದಿರಿಸಿದ್ದಾನೆ. ಅಲ್ಲಿ ಆತನು ತನ್ನನ್ನು ಜೀವನದ ರೊಟ್ಟಿಯಂತೆ ಪ್ರತಿಪಾದಿಸಿಕೊಂಡಿದ್ದಾನೆ. ಆಸಕ್ತಿಯುಳ್ಳ ಜನರ ಗುಂಪು ಆತನು ತಮ್ಮ ರೀತಿಯ ಮೆಸ್ಸೀಯನಾಗಿರುವುದಿಲ್ಲ ಎಂಬುದನ್ನು ನೋಡಲು ಪ್ರಾರಂಭಿಸುತ್ತದೆ. ಅವರ ಹೀನ ವಿಚಾರಗಳಿಗೆ ಆತನು ಒಪ್ಪಿಕೊಂಡಿದ್ದರೆ, ಭೂಲೋಕದ ಅರಸನಾಗಿರುವುದರಲ್ಲಿ ತೃಪ್ತನಾಗಿದ್ದರೆ, ಆತನು ಅತೀ ಶ್ರೇಷ್ಠ ಅಧಿಕಾರಕ್ಕೆ ಏರಿಸಲ್ಪಡುತ್ತಿದ್ದನು. *ಅದಕ್ಕಾಗಿ* ಆತನು ಬಂದಿರಲಿಲ್ಲ. ಮಾನವನ ವಿಮೋಚನೆಗಾಗಿ ಆತನ ಮಾರ್ಗವು ಶಿಲುಬೆಯ ಮಾರ್ಗವಾಗಿತ್ತು.

ಕಪೆರ್ನೌಮಿನ ಸಭಾಮಂದಿರದಲ್ಲಿಯ ಈ ದೊಡ್ಡ ಪ್ರಸಂಗವು ಯೇಸುವಿನ ಜೀವನದಲ್ಲಿ ತಿರುಗುವಿಕೆಯ ಇನ್ನೊಂದು ಅಂಶವನ್ನು ಗುರುತಿಸುತ್ತದೆ. "ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವದನ್ನು ಬಿಟ್ಟುಬಿಟ್ಟರು" (ಯೋಹಾನ 6:66). ಶಾಸ್ತ್ರಿಗಳು ಫರಿಸಾಯರು ಆತನನ್ನು ಬಹಳವಾಗಿ ದ್ವೇಷಿಸುತ್ತಿದ್ದರು; ಗದರೇನರು ಮತ್ತು ನಜರೇತಿನವರು ಆತನನ್ನು ತಿರಸ್ಕರಿಸಿದ್ದರು; ಹೆರೋದ ಅಂತಿಪನು ಆತನಲ್ಲಿ ಗಂಡಾಂತರಕಾರಿಯಾದ ಆಸಕ್ತಿಯನ್ನು ವಹಿಸಿದ್ದನು; ಈಗ ಆತನ ಶಿಷ್ಯರು ನಿರಾಶರಾಗಿ ಹಿಂದಿರುಗಿ ಹೊರಟು ಹೋದರು.

## V. ಐದನೆಯ ಹಂತ - ಪರ್ಣಶಾಲೆಗಳ ಹಬ್ಬದ ಸಮಯದಲ್ಲಿ ಗಲಿಲಾಯದಿಂದ ಅಂತಿಮವಾಗಿ ಹೊರಟುಹೋದದ್ದರವರೆಗೆ.

**1. ಅವಧಿ.**-ಯೇಸುವು ತನ್ನ ಸೇವೆಯಲ್ಲಿಯ ಮೂರನೆಯ ಪಸ್ಕ ಹಬ್ಬದಲ್ಲಿ ಭಾಗವಹಿಸಲಿಲ್ಲ. ಐದು ಸಾವಿರ ಜನರಿಗೆ ಊಟಮಾಡಿಸಿದ ಸಮಯಕ್ಕೆ ಸಮೀಪದಲ್ಲಿ ಅದು ಸಂಭವಿಸಿರಬೇಕು (ಯೋಹಾನ 6:4). ಗಲಿಲಾಯದ ಸೇವೆಯ ಈ ಅಂತಿಮ ಹಂತವು ಸುಮಾರು ಆರು ತಿಂಗಳುಗಳ ಕಾಲವನ್ನು, ಏಪ್ರೀಲಿನಿಂದ ಅಕ್ಟೋಬರದ ವರೆಗೆ ಒಳಗೊಂಡಿತ್ತು.

**2. ಹೊಸ ಸಂಗತಿಗಳು.**-ಅವಧಿಯು ಹೊಸದಾದ ಮತ್ತು ಗಮನ ಸೆಳೆಯುವ ಅಂಶಗಳನ್ನು ಮುಂದಿಡುತ್ತದೆ. ಅದು ಈ ಸಂಗತಿಗಳ ಅವಧಿಯಾಗಿತ್ತು, -

*a. ಸಂಚಾರಗಳು.*-ಯೇಸುವು ಒಂದರ ನಂತರ ಒಂದರಂತೆ ಫೊಯಿನೀಕ್ಯ ಭಾಷಾನ ಜಿಲ್ಲೆ ಮತ್ತು ದೆಕಪೊಲಿಗಳನ್ನು ಸಂದರ್ಶಿಸಿದನು. ಹೀಗಿದ್ದರೂ ಆತನು ಗಲಿಲಾಯದಲ್ಲಿ ತನ್ನ ಸೇವೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಲಿಲ್ಲ.

*b. ಏಕಾಂತವಾಸ.*-ಯೇಸುವು ನಿಶ್ಚಲವಾಗಿ ಜನಸಮೂಹಗಳನ್ನು ತಪ್ಪಿಸಿ ಕೊಂಡನು ಮತ್ತು ಹನ್ನೆರಡು ಶಿಷ್ಯರೊಂದಿಗೆ ಏಕಾಂತದಲ್ಲಿರುವುದನ್ನು ಹುಡುಕಿದನು.

*c. ಪ್ರತ್ಯೇಕ ಬೋಧನೆ.*-ಕೆಲವು ಅದ್ಭುತಗಳು ದಾಖಲೆ ಮಾಡಲ್ಪಟ್ಟಿದೆ. ಹಾಗೂ ಸ್ವಲ್ಪ ಬಹಿರಂಗ ಬೋಧನೆಯಿದೆ. ಆತನು ತನ್ನ ಶಿಷ್ಯರನ್ನು ತನ್ನ ರಾಜ್ಯದ ಮೂಲ ತತ್ವಗಳಲ್ಲಿ ತರಬೇತುಗೊಳಿಸುತ್ತಿದ್ದಾನೆ, ಮತ್ತು ತನ್ನ ಮುಂದೆ ಸಮೀಪಿಸುತ್ತಿದ್ದ ಮರಣಕ್ಕಾಗಿ ಸಿದ್ಧಪಡಿಸುತ್ತಿದ್ದಾನೆ (ಹೋಲಿಸು ಮತ್ತಾಯ 16:21-23; 17:9; ಮಾರ್ಕ 9:30-32).

**3. ಫೊಯಿನಿಕ್ಯಕ್ಕೆ ಸಂದರ್ಶನ** (ಮತ್ತಾಯ 15:21-28).-ಎಲ್ಲಾ ದೇಶಗಳ ಜನರನ್ನು ರಕ್ಷಿಸುವ ನಿಯೋಗ ಹೊಂದಿದಾತನು, ಒಂದು ಸಲ ಮಾತ್ರ ತನ್ನ ಸ್ವಂತನಾಡಿನ ಗಡಿಯನ್ನು ದಾಟಿ ಹೋದನು. ಈ ಸಂದರ್ಶನದ ಒಂದೇ ಘಟನೆಯು ದಾಖಲಿಸಲ್ಪಟ್ಟಿದೆ - ಸುರೋಫೊಯಿನಿಕ್ಯದ ಸ್ತ್ರೀಯ ಮಗಳನ್ನು ವಾಸಿಮಾಡಿದ್ದು. ಅಷ್ಟು ದೀನವಾದ, ಅಷ್ಟು ಜಯಿಸಲಾಗದ ಆಕೆಯ ನಂಬಿಕೆಯು ಫರಿಸಾಯರ ಕಪಟತನ ಮತ್ತು ಗಲಿಲಾಯದವರ ಚಂಚಲತೆಯ ನಂತರ ವಿಶ್ರಾಂತಿಯನ್ನು ತಂದಿರಬಹುದು. ತೂರ ಮತ್ತು ಸಿದೋನುಗಳನ್ನು ದಾಟಿಕೊಂಡು, ಯೇಸುವು ಹಿಂದಿರುಗಿ ದೆಕಪೊಲಿಗೆ ದೀರ್ಘ ಪ್ರಯಾಣ ಮಾಡಿದನು. ಇಲ್ಲಿ ಪುನಃ ಆತನ ಸುತ್ತ ದೊಡ್ಡ ಗುಂಪುಗಳು ಕೂಡಿಬರುತ್ತವೆ. ಮತ್ತು ಮತ್ತೊಮ್ಮೆ ಆತನು ಅದ್ಭುತಕರವಾಗಿ ಅವರಿಗೆ ಊಟಮಾಡಿಸುತ್ತಾನೆ, ಆಗ ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದನು. ಸರೋವರವನ್ನು ದಾಟಿ, ಆತನು ಪುನಃ ಗಲಿಲಾಯಕ್ಕೆ ಹಿಂದಿರುಗಿದನು. ಗಲಿಲಾಯದ ಸೇವೆಯ ಈ ಕೊನೆಯ ಹಂತದಲ್ಲೆಲ್ಲಾ, ಯೇಸುವು ಹೆರೋದ ಅಂತಿಪನ ಕ್ಷೇತ್ರದ ಹೊರಗೆ ಧೀರ್ಘವಾದ ಪ್ರಯಾಣ ಮಾಡಿದಾಗ, ಆತನು ಇನ್ನೂ ಗಲಿಲಾಯವನ್ನು ತನ್ನ ಕೇಂದ್ರವನ್ನಾಗಿಟ್ಟು ಕೊಂಡು, ಅಲ್ಲಿಂದ ಹೊರಡುವುದನ್ನು ಮತ್ತು ಅಲ್ಲಿಗೆ ಹಿಂದಿರುಗುವುದನ್ನು ಗಮನಿಸುವುದು ಯೋಗ್ಯವಾದದ್ದಾಗಿದೆ.

**4. ಫಿಲಿಪ್ಪನ ಕೈಸರಿಯಕ್ಕೆ ಸಂದರ್ಶನ; ದೊಡ್ಡ ಅರಿಕೆ** (ಮತ್ತಾಯ 16).-ಯೇಸುವು ಗಲಿಲಾಯಕ್ಕೆ ಹಿಂದಿರುಗಿದಾಗ, ಫರಸಾಯರು, ಈಗ ಸದ್ದುಕಾಯರಿಂದ ಜೊತೆಗೂಡಿದವರಾಗಿ, ತಮ್ಮ ದಾಳಿಗಳನ್ನು ಪುನಃ ಪ್ರಾರಂಭಿಸಿದರು (ಮತ್ತಾಯ 16:1-4); ಮತ್ತು, ಹೆರೋದ ಫಿಲಿಪ್ಪನ ಕ್ಷೇತ್ರದಲ್ಲಿ ಈ ಪ್ರಯಾಣಕ್ಕೆ ಹೊರಟಂತೆ

ಯೇಸುವು ತನ್ನ ಶಿಷ್ಯರಿಗೆ ಫರಿಸಾಯರ ಮತ್ತು ಸದ್ದುಕಾಯರ "ಹುಳಿ"ಯ ಬಗ್ಗೆ ಗಂಭೀರವಾದ ಎಚ್ಚರಿಕೆ ಕೊಟ್ಟನು.

ಆತನ ಸೇವೆಯ ಅಂತ್ಯವು ಈಗ ಸಮೀಪಿಸುತಿತ್ತು. ಮೊದಲು ಎಂದೂ ಆತನು ತಾನು ಮೆಸ್ಸೀಯನೆಂದು ಹೇಳಿಕೊಂಡಿರಲಿಲ್ಲ. ಆತನು ಮಾಡಿದ ಕಾರ್ಯಗಳ ಮುಖಾಂತರ, ಆತನು ಹೇಳಿದ ಸತ್ಯಗಳ ಮುಖಾಂತರ, ಆತನು ಜೀವಿಸಿದ ಜೀವನದ ಮುಖಾಂತರ ಮನುಷ್ಯರ ಮನಸ್ಸಿನಲ್ಲಿ ಸತ್ಯವು ಉದಯವಾಗಬೇಕೆಂದು ಆತನು ಬಯಸಿದ್ದನು, ಆದರೆ ಪರಿಣಾಮಗಳನ್ನು ಪರೀಕ್ಷಿಸುವ ಸಮಯವು ಬಂದಿತು ಮತ್ತು ಅವರ ಮೌನ ನಂಬಿಕೆಯನ್ನು ಬಹಿರಂಗ ಅರಿಕೆಯಲ್ಲಿ ತಿರುಗಿಸ ಬೇಕಾಗಿತ್ತು, ಏಕಾಂತ ಪ್ರಾರ್ಥನೆಯ ಸಮಯದ ನಂತರ ಹನ್ನೆರಡು ಜನರಿಗೆ ಎರಡು ಪ್ರಶ್ನೆಗಳನ್ನು ಕೇಳಿದನು:

"ಜನರು ಮನುಷ್ಯಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ?"[7]

ವಿವಿಧ ಉತ್ತರಗಳು ಬಹಿರಂಗವು ಆತನನ್ನು ಮತ್ತು ಆತನ ನಿಯೋಗವನ್ನು ಗ್ರಹಿಸಿಕೊಳ್ಳುವಲ್ಲಿ ಪೂರ್ಣವಾಗಿ ಸೋತು ಹೋಗಿದೆ ಎಂಬುದನ್ನು ತೋರಿಸುತ್ತದೆ.

"ನೀವು ನನ್ನನ್ನು ಯಾರನ್ನುತ್ತೀರಿ?"[8]

*"ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು."*[9]

ಈ ಅರಿಕೆಯ ಮಹತ್ವವನ್ನು ಅತಿಶಯವಾಗಿ ಹೇಳುವುದು ಅಸಾಧ್ಯವಾಗಿದೆ. *ಅವರೂ* ಸಹ ಸತ್ಯವನ್ನು ತಪ್ಪಿಸಿಕೊಂಡಿದ್ದರೆ ಏನೆಂಬುದನ್ನು ಊಹಿಸಿರಿ.

ಮಾತಾಡಿದವನು ಪೇತ್ರನು; ತನಗೊಬ್ಬನಿಗಾಗಿಯೇ ಮಾತಾಡಲಿಲ್ಲ, ಆದರೆ ಹನ್ನೆರಡು ಜನರಿಗಾಗಿ ಮಾತಾಡಿದನು. ಆಗ ಯೇಸುವಿನ ಕಾರ್ಯವು ಒಂದು *ಸೋಲಾಗಿರಲಿಲ್ಲ.* ಆತನು ತನ್ನ ಸುತ್ತಲಿನ ಚಿಕ್ಕ ವರ್ತುಳದಲ್ಲಿ ತನ್ನ ಭವಿಷ್ಯದ ಸಭೆಯ ಮೊಳಕಗಳನ್ನು ನೋಡುತ್ತಾನೆ ಹಾಗೂ ಪೇತ್ರನ ಅರಿಕೆಯಲ್ಲಿ ಅದು ಕಟ್ಟಲ್ಪಡಬೇಕಾಗಿದ್ದ ಸತ್ಯವನ್ನು, ನಿಜವಾದ "ಅಪೊಸ್ತಲ ವಿಶ್ವಾಸ ಸೂತ್ರವನ್ನು" ನೋಡುತ್ತಾನೆ, ಆದರೆ ಈಗ ಅದು ಘೋಷಿಸಲ್ಪಡುವದಿಲ್ಲ. ತನ್ನ ಮೆಸ್ಸೀಯತ್ವಕ್ಕೆ ಅವರನ್ನು ಒಪ್ಪಸಿಕೊಟ್ಟು, ಯೇಸುವು ತನ್ನ ಮೆಸ್ಸಿಯತ್ವವು ಏನಾಗಿರುವದೆಂಬುದನ್ನು ಪ್ರಕಟಿಸಲು ಮುಂದುವರಿಯುತ್ತಾನೆ - ತಿರಸ್ಕರಿಸುವಿಕೆ, ಮರಣ, ಪುನರುತ್ಥಾನ, ಲೌಕಿಕ ತತ್ವಗಳಿಂದ ಸುತ್ತುವರಿಯಲ್ಪಟ್ಟ ಪೇತ್ರನು ವಿರೋಧಿಸುತ್ತಾನೆ. "ಸೈತಾನನೇ ನನ್ನ ಮುಂದೆ ನಿಲ್ಲಬೇಡ, ನಡೆ"[10] ಎಂಬುದು ಒಡೆಯನ ತಕ್ಷಣದ ಗದರಿಕೆ, ಮತ್ತು ಒಂದು ಪಾಠದೊಂದಿಗೆ ಆತನು ಅದನ್ನು ಮುಂದುವರಿಸುತ್ತಾನೆ, ಶಿಷ್ಯತ್ವವು ಎಂದರೆ ತನ್ನನ್ನು ಅಲ್ಲಗಳೆದುಕೊಳ್ಳುವುದು; ಕಿರೀಟ ವನ್ನು ಧರಿಸಿಕೊಳ್ಳುವ ಮೊದಲು ಶಿಲುಬೆಯನ್ನು ಹೊರುವುದು.

**5. ಪ್ರಕಾಶರೂಪವನ್ನು ಧರಿಸಿದ್ದು** (ಮತ್ತಾಯ 17:1-13).-ಈ ಅವಧಿಯಲ್ಲೆಲ್ಲಾ ಯೇಸುವು ಕತ್ತಲಾಗುತ್ತಿರುವ ಛಾಯೆಗಳ ಮಧ್ಯದಲ್ಲಿ ನಡೆದನು; ಆತನ ಹಿಂದೆ, ಗಲಿಲಾಯದವರಿಂದ ಆತನ ತಿರಸ್ಕಾರ; ಮುಂದೆ, ಶಿಲುಬೆ; ಆತನ ಸುತ್ತಲೂ ಇನ್ನೂ ನಂಬಿಗಸ್ತ ಶಿಷ್ಯರ ಮಂಡಳಿ; ಆತನ ಮೇಲೆ ಬದಲಿಸಲಾಗದ ತಂದೆಯ ಪ್ರೀತಿ. ಗಲಿಲಾಯದಲ್ಲಿ ತನ್ನ ವೈರಿಗಳನ್ನು ಎದುರಿಸಲು ಮತ್ತು ಯೂದಯದಲ್ಲಿಯ ಇನ್ನೂ ಹೆಚ್ಚು ವಿರೋಧಿಸುವವರನ್ನು ಎದುರಿಸಲು ಪುನಃ ಹಿಂದಿರುಗಿ ಹೋಗುವ ಮೊದಲು, ದೈವಿಕ ಪ್ರಸನ್ನತೆಯ ವೈಭವವುಳ್ಳ ಒಂದು ಚಿನ್ಹೆಯು ಮತ್ತು ಮನ್ನಣೆಯು ಆತನಿಗೆ ಕೊಡಲ್ಪಟ್ಟಿತು. ರೂಪಾಂತರದ ದೃಶ್ಯವು ಭಾಗಶಃವಾಗಿ ಶಿಷ್ಯರಿಗಾಗಿತ್ತು, ಆದರೆ ಮುಖ್ಯ ವಾಗಿ ಅವರ ಒಡೆಯನಿಗಾಗಿತ್ತು, ಅದನ್ನು ಆಯ್ಕೆಯಾದ ಮೂವರು - ಪೇತ್ರ, ಯಾಕೋಬ ಮತ್ತು ಯೋಹಾನರು ನೋಡಿದರು. ಆಸಕ್ತಿಯ ಪ್ರಾರ್ಥನೆಯಲ್ಲಿ ಆತನು ಮುಳುಗಿ

ದ್ದಾಗ, ಮೌನದ ತೆರೆಯನ್ನು ಮುರಿಯುವ ಮುಖಾಂತರ ದೈವತ್ವವು ಮುಖವನ್ನೂ ಉಡುಪನ್ನೂ ಪಾರಲೌಕಿಕ ಪ್ರಕಾಶದಿಂದ ಹೊದಿಸಿತು. ಹಳೇ ಒಡಂಬಡಿಕೆಯ ಮಧ್ಯಸ್ಥಗಾರನಾದ ಮೋಶೆ, ಮಹಾ ಸುಧಾರಕನಾದ ಎಲೀಯರು, ಯೆರೂಸಲೇಮಿನಲ್ಲಿ ಆತನಿಗೆ ಬರಲಿಕ್ಕಿದ್ದ ಶ್ರಮೆಯ ಬಗ್ಗೆ ಆತನೊಂದಿಗೆ ಮಾತನಾಡುತ್ತಾ ಕಾಣಿಸಿಕೊಂಡರು; ಯೋರ್ದನ್ನನಲ್ಲಿಯಂತೆ, ಪರಲೋಕದೊಳಗಿಂದ ಒಂದು ವಾಣಿಬಂದಿತು; "ಈತನು ಪ್ರಿಯನಾಗಿರುವ ನನ್ನ ಕುಮಾರನು; ಈತನನ್ನು ನಾನು ಮೆಚ್ಚಿದ್ದೇನೆ,"[11] "ಈತನ ಮಾತನ್ನು ಕೇಳಿರಿ" ಎಂಬುದು ಮಹತ್ವದ್ದಾಗಿ ಕೂಡಿಸಲಪಟ್ಟಿತು. ಇದು ನಿಜವಾಗಿಯೂ ಅರ್ಥಗರ್ಭಿತವಾದ ದೃಶ್ಯವಾಗಿತ್ತು. ಇದು ಬಹಳ ಕಾಲದವರೆಗೆ ಒಬ್ಬ ಅಪೊಸ್ತಲನ ಸ್ಮರಣೆಯಲ್ಲಿ ಉಳಿದುಕೊಂಡಿತ್ತು (2 ಪೇತ್ರ 1:16-18). ಪ್ರವಾದಿಗಳು ಮತ್ತು ಅಪೊಸ್ತಲರು, ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ, ಪರಲೋಕ ಮತ್ತು ಭೂಲೋಕ ಅಲ್ಲಿ ಸಂದರ್ಶಿಸಿದವು. ಯೇಸುವಿಗೆ ಅದು ಫಲವಿಲ್ಲದ ಸೇವೆಯ ಮೇಲೆ ತಂದೆಯ ಮನ್ನಣೆಯ ಮುದ್ರೆಯಾಗಿತ್ತು, ಮತ್ತು ಆತನೊಂದಿಗೆ ಅಂತ್ಯದವರೆಗೆ ತಾನಿರುವೆನೆಂಬುದರ ಭರವಸೆಯಾಗಿತ್ತು. ಶಿಷ್ಯರಿಗೆ ಅದು ಅವರ ಅರಿಕೆಯು ತಪ್ಪಾದದ್ದಾಗಿರಲಿಲ್ಲ ಅಥವಾ ಅವರ ಭರವಸೆಯು ತಪ್ಪಾಗಿಡಲ್ಪಟ್ಟಿರುವದಿಲ್ಲ ಎಂಬ ಅರ್ಥವಾಗಿತ್ತು; ಅಂದಿನಿಂದ ಅವರು ಮೋಶೆಯನ್ನಲ್ಲ ಆದರೆ ಕ್ರಿಸ್ತನ ಮಾತು ಕೇಳ ಬೇಕು ಮತ್ತು ಪ್ರಸಂಗಿಸಬೇಕು. ಆದರೆ ಪುನಃ ತಾತ್ಕಾಲಿಕ ಮೌನದ ಮುದ್ರೆಯು ಅವರ ತುಟಿಗಳ ಮೇಲೆ ಹಾಕಲ್ಪಟ್ಟಿತು. ದರ್ಶನದ ಸಂಪೂರ್ಣ ಅರ್ಥವು ಪುನರುತ್ಥಾನದ ಹಾಗೂ ದಿವಾರೋಹಣದ ಬೆಳಕಿನಲ್ಲಿ ಮಾತ್ರವೇ ಕಾಣಲ್ಪಡವುದು. ದರ್ಶನದ ಬೆಟ್ಟದಿಂದ ಕೆಳಗಿಳಿದು ಬಂದಾಗ, ಯೇಸುವು ಮೂರ್ಛಾರೋಗಿ ದೆವ್ವಹಿಡಿದ ಬಾಲಕನನ್ನು ಗುಣಪಡಿಸಿದನು. ಮತ್ತು ಕಪೆರ್ನೌಮಿಗೆ ಹಿಂದಿರುಗಿದನು. ಇನ್ನೂ ಯೆರೂಸಲೇಮಿನಲ್ಲಿ ಬರಲಿಕ್ಕಿದ್ದ ಅವಘಡಕ್ಕಾಗಿ ಶಿಷ್ಯರನ್ನು ಸಿದ್ಧಪಡಿಸುತ್ತಿರುವದರಲ್ಲಿ ಪ್ರಯಾಸಪಡುತ್ತಿದ್ದನು.

**6. ಗಲಿಲಾಯದ ಸೇವೆಯ ಅಂತ್ಯ.**-ಯೇಸುವು ಗಲಿಲಾಯದಲ್ಲಿ ಬಹಳ ಸಮಯ ಕಾಯಲಿಲ್ಲ. ಅಲ್ಲಿ ಆತನ ಮಹಾ ಕಾರ್ಯವು ಮಾಡಲ್ಪಟ್ಟಿತು. ಜನರ ಗುಂಪುಗಳನ್ನು ತಪ್ಪಿಸಿಕೊಂಡು, ಕೆಲವೇ ಅದ್ಭುತಗಳನ್ನು ಮಾಡುತ್ತ, ತನ್ನ ಶಿಷ್ಯರ ಮೇಲೆ ತನ್ನ ರಾಜ್ಯದ ಆತ್ಮಿಕತೆಯ ಪ್ರಭಾವ ಬೀರುತ್ತ ಮುನ್ನಡೆದನು. ಅವರು ಅದರಲ್ಲಿ ಪ್ರವೇಶಿಸ ಬೇಕಾದರೆ ಮಕ್ಕಳಲ್ಲಿರುವಂತ ದೀನತೆಯ ಅವಶ್ಯಕತೆಯನ್ನು ಹೇಳಿದನು (ಮತ್ತಾಯ 18:1-14). ಪರ್ಣಶಾಲೆಗಳ ಮಹಾ ಹಬ್ಬವು ಈಗ ಸಮೀಪಿಸಿತ್ತು, ಮತ್ತು ಚಿಕ್ಕ ಮಂಡಳಿಯು ಸಮಾರ್ಯವನ್ನು ದಾಟಿಹೋಗಿ ಇನ್ನೊಂದು ಸಲ ಯೆರೂಸಲೇಮಿಗೆ ಹೋಯಿತು.

---

ಟಿಪ್ಪಣಿಗಳು

[1]ಮತ್ತಾಯ 9:13; ಮಾರ್ಕ 2:17; ಲೂಕ 5:32.

[2]ಅಪೊಸ್ತಲರ ನಾಲ್ಕು ಯಾದಿಗಳು ಇರುತ್ತವೆ:

| ಮತ್ತಾಯ 10:2-4 | ಮಾರ್ಕ 3:16-19 | ಲೂಕ 6:14-16 | ಅ.ಕೃತ್ಯಗಳು 1:13 |
|---|---|---|---|
| ಸೀಮೋನ ಪೇತ್ರ | ಸೀಮೋನ ಪೇತ್ರ | ಸೀಮೋನ ಪೇತ್ರ | ಸೀಮೋನ ಪೇತ್ರ |
| ಅಂದ್ರೆಯ | ಯಾಕೋಬ | ಅಂದ್ರೆಯ | ಯಾಕೋಬ |
| ಯಾಕೋಬ | ಯೋಹಾನ | ಯಾಕೋಬ | ಯೋಹಾನ |
| ಯೋಹಾನ | ಅಂದ್ರೆಯ | ಯೋಹಾನ | ಅಂದ್ರೆಯ |

| | | | |
|---|---|---|---|
| ಫಿಲಿಪ್ಪ | ಫಿಲಿಪ್ಪ | ಫಿಲಿಪ್ಪ | ಫಿಲಿಪ್ಪ |
| ಬಾರ್ತೊಲೊಮಾಯ | ಬಾರ್ತೊಲೊಮಾಯ | ಬಾರ್ತೊಲೊಮಾಯ | ತೋಮ |
| ತೋಮ | ಮತ್ತಾಯ | ಮತ್ತಾಯ | ಬಾರ್ತೊಲೊಮಾಯ |
| ಅಲ್ಫಾಯನ ಮಗ | ಅಲ್ಫಾಯನ ಮಗ | ಅಲ್ಫಾಯನ ಮಗ | ಅಲ್ಫಾಯನ ಮಗ |
| ಯಾಕೋಬ | ಯಾಕೋಬ | ಯಾಕೋಬ | ಯಾಕೋಬ |
| ಲೆಬ್ಬಾಯ, | ತದ್ದಾಯ | ಮತಾಭಿಮಾನಿ | ಮತಾಭಿಮಾನಿ |
| ತದ್ದಾಯ | | ಸೀಮೋನ | ಸಿಮೋನ |
| ಕಾನಾನಿನ | ಕಾನಾನಿನ | ಯಾಕೋಬನ | ಯಾಕೋಬನ |
| ಸೀಮೋನ | ಸೀಮೋನ | ಸಹೋದರ ಯೂದ | ಸಹೋದರ ಯೂದ |
| ಇಸ್ಕರಿಯೋತ ಯೂದ | ಇಸ್ಕರಿಯೋತ ಯೂದ | ಇಸ್ಕರಿಯೋತ ಯೂದ | - |

ಗಮನಿಸಿರಿ: (1) ಮೂರು ಗುಂಪುಗಳಿವೆ. (2) ಯಾದಿಯಲ್ಲಿ ಪೇತ್ರನು ಮೊದಲನೆಯವನು, ಫಿಲಿಪ್ಪನು ಎರಡನೆಯವನು ಮತ್ತು ಅಲ್ಫಾಯನ ಮಗನಾದ ಯಾಕೋಬನು (ಅಲ್ಫಾಯನು) ಮೂರನೆಯವನು. (3) "ಮತಾಭಿಮಾನಿ" ಎಂಬುದು ಗ್ರೀಕ್ ಪದ. ಅರಮಾಯ ಪದ "ಕಾನಾನ್ಯನು" ಎಂಬುದಕ್ಕೆ ಆ ಗ್ರೀಕ್ ಪದವಿದೆ. (4) ಇಸ್ಕರಿಯೋತ ಯೂದನ ಹೆಸರು ಎಲ್ಲಾ ಯಾದಿಗಳಲ್ಲಿ ಕೊನೆಯದಾಗಿದೆ. (5) ತದ್ದಾಯ ಎಂಬುದು ಬಹುಶಃ ಯಾಕೋಬನ ಸಹೋದರ ಯೂದ ಎಂಬುಕ್ಕೆ ಒಂದೆಯಾಗಿದೆ.

[3]ಮಾರ್ಕ 4:39; ನೋಡಿರಿ ಮತ್ತಾಯ 8:26; ಲೂಕ 8:24. [4]ಮತ್ತಾಯ 8:27; ನೋಡಿರಿ ಮಾರ್ಕ 4:41; ಲೂಕ 8:25. [5]ಡೀನ್ ಅವರು "wrought" ಎಂದಿದ್ದಾರೆ. [6]ಮತ್ತಾಯ 3:2; 4:17; ನೋಡಿರಿ ಮಾರ್ಕ 1:14ಬಿ, 15. [7]ಮತ್ತಾಯ 16:13; ಇವುಗಳನ್ನೂ ನೋಡಿರಿ ಮಾರ್ಕ 8:27; ಲೂಕ 9:18. [8]ಮತ್ತಾಯ 16:15; ಮಾರ್ಕ 8:29; ಲೂಕ 9:20. [9]ಮತ್ತಾಯ 16:16; ಇವುಗಳನ್ನೂ ನೋಡಿರಿ ಮಾರ್ಕ 8:29; ಲೂಕ 9:20. [10]ಮತ್ತಾಯ 16:23; ಮಾರ್ಕ 8:33.

[11]ಮತ್ತಾಯ 17:5; ನೋಡಿರಿ ಮಾರ್ಕ 9:7; ಲೂಕ 9:35.

© 2009 Truth for Today